ಹೊರಗಿನಿಂದ ಹಕ್ಕಿಗಳ ನೋಡಿ ಸಂತೋಷಪಡಲು ಜನರು ಬರುತ್ತಾರೆ ಎಂಬ ವಿಷಯವೇ ಇವರಿಗೆ ಸುಳ್ಳು ಎನಿಸಿತ್ತು. ಮಾಂಸ ಬಯಸಿ ಬರುವ ಜನರನ್ನಷ್ಟೇ ನೋಡಿದ್ದರೇ ವಿನಃ ಕ್ಯಾಮೆರಾ, ಬೈನಾಕ್ಯುಲರ್ ಹೊತ್ತು ಬರಬಹುದಾದ ಮನುಷ್ಯರ ಬಗ್ಗೆ ಅವರಿಗೆ ಸಂಶಯವಿತ್ತು. ಛಲ ಬಿಡದ ನಂದಕಿಶೋರ್ ಹಕ್ಕಿಪ್ರಿಯರ ಗುಂಪು ದೊಡ್ಡ ಮಾಡಿದರು. ದೇಶದ ಖಗಪ್ರೇಮಿಗಳಿಗೆಲ್ಲಾ ವಿಷಯ ಮುಟ್ಟಿಸಿ ಸಾಂಘಿಕವಾಗಿ ಈ ಕೆಲಸದಲ್ಲಿ ಕೈ ಜೋಡಿಸಿ ಎಂದು ಕೇಳಿಕೊಂಡರು. ಇದಕ್ಕೆ ಒಳ್ಳೆಯ ಬೆಂಬಲವೂ ಸಿಕ್ಕಿತು. ಖಗಗಳನ್ನು ಹೊಡೆಯುವ ಬದಲಿಗೆ ಅವುಗಳ ತೋರಿಸಿ ಹಣ ಸಂಪಾದಿಸುವ ಕಲೆಯನ್ನು ಮೀನುಗಾರರಿಗೆ ಕಲಿಸುವ ಹೊಸ ಕೆಲಸ ಶುರು ಮಾಡಿಯೇ ಬಿಟ್ಟರು.

ಹೊಸ ಬೈನಾಕ್ಯುಲರ್‌ಗಳನ್ನು ತರಿಸಿ ಅದರ ಮೂಲಕ ಹಕ್ಕಿಗಳನ್ನು ನೋಡುವ ವಿಧಾನವನ್ನು ಅವರಿಗೆಲ್ಲಾ ಕಲಿಸಿದರು. ಭಾರತದ ವೈಲ್ಡ್ ಲೈಫ್ ಫೋಟೊಗ್ರಾಫರ್‌ಗಳನ್ನು ಚಿಲಾಕಾಗೆ ಬರುವಂತೆ ಆಹ್ವಾನಿಸಿದರು. ಈ ಬಗ್ಗೆ ಮಾಧ್ಯಮಗಳು ಹೆಚ್ಚು ಪ್ರಚಾರ ನೀಡಿದವು. “ಪಕ್ಷಿಪ್ರಿಯರು ಹೆಚ್ಚು ಹೆಚ್ಚಾಗಿ ಇಲ್ಲಿಗೆ ಬರಬೇಕು. ಈ ಜನಕ್ಕೆ ಪಕ್ಕಾಕೆಲಸ ಸಿಗುವುದು ಖಚಿತವಾದರೆ ಖಂಡಿತಾ ಬೇಟೆಯಾಡುವ ಈ ಕಸುಬನ್ನು ಇವರು ಬರಖಾಸ್ತು ಮಾಡುತ್ತಾರೆ” ಎಂದು ಅನೇಕರಲ್ಲಿ ಮನವಿ ಮಾಡಿಕೊಂಡರು.

ಒಂದು ಸಂಜೆ ದೊಡ್ಡ ಸಭೆ ಮಾಡಿ “ನಿಮ್ಮ ಮನೆಗೆ ಯಾರಾದರೂ ಅತಿಥಿಗಳು ಬಂದರೆ ಅವರ ಕತ್ತು ಹಿಸುಕಿ ಕೊಲ್ಲುತ್ತೀರಾ? ಇಲ್ಲಾ ತಾನೆ? ಹಾಗೆಯೇ ಹಕ್ಕಿಗಳು ದೇವರ ಪ್ರತಿನಿಧಿಗಳಾಗಿ ನಿಮ್ಮಲ್ಲಿಗೆ ಬರುತ್ತಾ ಇವೆ. ಯೋಚಿಸಿ ನೋಡಿ, ನೀವಿರುವ ಈ ಭೂಮಿ ದೇವ ನೆಲವಾಗಿದೆ. ಊಟ ಹುಡುಕಿಕೊಂಡು ನಿಮ್ಮನ್ನೇ ಮುಗ್ಧವಾಗಿ ನಂಬಿ ಹಸಿವಲ್ಲಿ ಬರುತ್ತಿರುವ ಅವುಗಳನ್ನು ಕೇವಲ ನಲವತ್ತು ರೂಪಾಯಿ ಬೆಲೆಯ ಮಾಂಸದಾಸೆಗೆ ನೀವು ಸಾಯಿಸುತ್ತಿದ್ದರೆ ದೇವರು ನಿಮಗೆ ನಿಮ್ಮ ಮಕ್ಕಳಿಗೆ ಒಳಿತು ಮಾಡುವನೆ?’’ ಎಂದೆಲ್ಲಾ ಭಾವನಾತ್ಮಕವಾಗಿ ಮಾತಾಡಿದರು.

ಇದು ತಕ್ಕಮಟ್ಟಿಗೆ ಕೆಲಸ ಮಾಡಿತು. ಮುಂದೆ ಖಗ ಪ್ರಿಯರು ತಂಡವಾಗಿ ಬಂದರು. ಪ್ರವಾಸಿಗಳು ಉಳಿಯುವ ಮನೆಯ ಬಾಡಿಗೆ, ಊಟ ಉಪಚಾರದ ಕಮಾಯಿ, ಆಟೋ ಓಡಿಸುವ ದುಡಿಮೆ, ನಾವೆ ನಡೆಸುವ ಜನರ ಕೈಗೆ ಕಾಸು, ಅಂಗಡಿ ಇಟ್ಟವರಿಗೆ ಕಾಂಚಾಣ ದಕ್ಕತೊಡಗಿದ ಮೇಲೆ ಹಕ್ಕಿಗಳ ಬೇಟೆ ಇಲ್ಲಿ ಸಂಪೂರ್ಣವಾಗಿ ನಿಂತೇ ಹೋಯಿತು. ದೇಶ ವಿದೇಶದಿಂದ ಜನ ದಂಡಾಗಿ ಧಾವಿಸಿ ಬರತೊಡಗಿದರು.

ಇವತ್ತು ಈ ಚಿಲಕಾ ಸರೋವರದಲ್ಲಿ ಒಮ್ಮೆಗೆ ಐವತ್ತು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರೆಕ್ಕೆಪುಕ್ಕಗಳ ಜೀವರಾಶಿಯನ್ನು ಕಾಣಬಹುದು. ಇನ್ನೂರೈವತ್ತಕ್ಕೂ ಮಿಕ್ಕಿ ಸ್ಥಳೀಯ ಪ್ರಜಾತಿಯ ಹಕ್ಕಿಗಳು ಸದಾ ಇದ್ದೇ ಇರುತ್ತವೆ. ಪ್ರತಿವರ್ಷ ಎರಡೂವರೆ ಲಕ್ಷಕ್ಕಿಂತ ಅಧಿಕ ಖಗಗಳು ಹೊರ ದೇಶಗಳಿಂದ ವಲಸೆ ಬರುತ್ತವೆ. ವಿಶೇಷ ಏನೆಂದರೆ ಇಲ್ಲಿನ ಸ್ಥಳೀಯ ಹಕ್ಕಿಗಳು ಮಾಂಸಾಹಾರಿಗಳು. ಹೊರಗಿನಿಂದ ಇಲ್ಲಿ ಬಂದು ನೆಲಸಿ ತಮ್ಮ ಮರಿಗಳನ್ನು ಮಾಡಿಕೊಂಡು ಸಂಸಾರ ಬೆಳೆಸಿ ಹೊರಡುವ ಹಕ್ಕಿಗಳು ಮಾತ್ರ ಸಸ್ಯಾಹಾರಿಗಳು.

ಇಲ್ಲಿನ ಜೌಗು ನೀರಿನ ಹುಲ್ಲುಗಳಲ್ಲಿ ಹಾವುಗಳು ತುಂಬಾ ಜಾಸ್ತಿ ಸೇರಿಕೊಂಡಿರುತ್ತವೆ. ಮೀನು ಹಿಡಿಯಲು ಬರುವ ಉರಗಗಳನ್ನು ವಿಶೇಷವಾಗಿ ಹಿಡಿದು ಮುಕ್ಕಲು ಬ್ಲಾಕ್ ಹೆಡೆಡ್ ಐಬೀಸ್ ಎಂಬ ಹಕ್ಕಿ ಬರುತ್ತದೆ. ಇದರ ಚಿತ್ರಗಳನ್ನು ಹೊಂಚುಹಾಕಿ ತೆಗೆಯ ಬಯಸುವ ಜನ ಇಲ್ಲಿ ದಂಡಿಯಾಗಿ ಬರುತ್ತಾರೆ. ಬೆಹರ ಜನರಿಗೆ ಮುಂದೆ ಹಣಕಾಸಿನ ಸಮಸ್ಯೆ ಉಂಟಾದರೆ ಮತ್ತವರು ಹಕ್ಕಿ ವಧೆಗೆ ಇಳಿಯುವ ಅಪಾಯ ಇದ್ದೇ ಇದೆ. ಜೊತೆಗೆ ಫೋಟೊಗ್ರಫಿ ಪ್ರವಾಸಿಗರನ್ನು ಪೂರ್ಣ ನಂಬುವಂತೆಯೂ ಇಲ್ಲ. ಈ ಕಾರಣಕ್ಕೆ ನಂದಕಿಶೋರ್ ಬಳಗದವರು ವರ್ಷವಿಡೀ ಆದಾಯ ಸಿಗುವ ಮೂಲವನ್ನೂ ತಲಾಶ್ ಮಾಡಿದ್ದಾರೆ. ಎಮ್ಮೆ ಸಾಕಾಣಿಕೆಯನ್ನು ಪ್ರೋತ್ಸಾಹಿಸಿ, ಉತ್ತಮ ತಳಿಯ ರಾಸುಗಳ ಹುಡುಕಿ ತರಿಸಿ ಮನೆಮನೆಗೂ ಹಂಚಿದ್ದಾರೆ.

ಜೌಗು ನೀರಿನಲ್ಲಿ ಜೊಂಡು ಮೇಯ್ದು, ಉಪ್ಪು ಮಿಶ್ರಿತ ಸಿಹಿ ನೀರು ಕುಡಿದು ಗಟ್ಟಿ ಹಾಲು ಕೊಡುವ ಗುಣವನ್ನು ಇಲ್ಲಿನ ಎಮ್ಮೆಗಳು ಒಲಿಸಿಕೊಂಡಿವೆ. ಹೀಗಾಗಿ ಇವುಗಳ ಇಮ್ಯೂನಿಟಿ ಶಕ್ತಿ ಕೂಡ ಹೆಚ್ಚಂತೆ. ಜೊತೆಗೆ ಈ ಮಹಿಷಗಳು ಜೌಗು ನೆಲದಲ್ಲಿ ನಡೆದಾಡುವುದರಿಂದ ಕೆಸರಿನಲ್ಲಿ ಹುಗಿದು ಕೂತ ಮೀನುಗಳು ಹೊರಕ್ಕೆ ಬಂದು ಮೀನುಗಾರರು ಅವುಗಳನ್ನು ಸಲೀಸಾಗಿ